ಸಂಖ್ಯೆ: B2/GFL/CR- 1227/1978-79

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ
ಕೆನರಾ ವೃತ್ತ,
ಶಿರಸಿ-581 402, ದಿನಾಂಕ: 30/08/2019.
05/09

ಇವರಿಗೆ,

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಅಸಂಕಾ)
ಅರಣ್ಯ ಭವನ, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ,
ಬೆಂಗಳೂರು-560 003.

ಮಾನ್ಯರೆ,

ವಿಷಯ: Change of land use pattern of diverted forest land for achieving the objectives of the Totgar's Co-operative Sale Society ltd. Sirsi along with construction of Ayurvedic Hospital.

ಉಲ್ಲೇಖ:
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ಎಫ್‌ಸಿಎ/11.2/193/ಕೆಎಆರ್/ಬಿಸಿ/2112 ದಿನಾಂಕ: 16-01-2002 (ಸ್ಟೇಜ್-1 ಅನುಮೋದನೆ) ಮತ್ತು 13.4.2016 (ಸ್ಟೇಜ್-2 ಅನುಮೋದನೆ)
2. ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 85 ಎಫ್‌ಎಲ್‌ಎಲ್ 2011 ಬೆಂಗಳೂರು ದಿ: 4-6-2016
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ ಇವರ ಕಛೇರಿ ಪತ್ರ ಸಂಖ್ಯೆ: ಎ3/ಜಿಎಫ್‌ಎಲ್/ಲ್ಯಾಂಡ್/ಸಿಆರ್-1/2014-15/2019-20/1149 ದಿ: 17-07-2019

******

ಉಲ್ಲೇಖ (1)ರ ಪತ್ರಗಳಲ್ಲಿ ಕೇಂದ್ರ ಸರ್ಕಾರ ಹಾಗೂ ಉಲ್ಲೇಖ (2)ರ ಆದೇಶದಲ್ಲಿ ರಾಜ್ಯ ಸರ್ಕಾರ 1980ರ ಅರಣ್ಯ ಸಂರಕ್ಷಣೆ ಕಾಯ್ದೆಯ ಮೇರೆಗೆ ತೋಟಗಾರ್ ಕೋ-ಆಪರೇಟಿವ್ ಸೇಲ್ಸ್ ಸೊಸೈಟಿ ಶಿರಸಿ ಇವರಿಗೆ ಶಿರಸಿ ತಾಲ್ಲೂಕು ಚಿಪಗಿ ಗ್ರಾಮ ಅ.ಸ.ನಂ. 47ರಲ್ಲಿ 2.02 ಹೆ. ಅರಣ್ಯ ಪ್ರದೇಶವನ್ನು ಆಸ್ಪತ್ರೆ ನಿರ್ಮಾಣಕ್ಕಾಗಿ ಮಾತ್ರ ಮಂಜೂರಾತಿಯನ್ನು ನೀಡಿದೆ.

ಉಲ್ಲೇಖ (3)ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿರಸಿ ವಿಭಾಗ ಶಿರಸಿ ರವರು ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ವರದಿ ಸಲ್ಲಿಸಿರುತ್ತಾರೆ. ಉಲ್ಲೇಖ (2)ರ ಅನುಮೋದನೆಯಲ್ಲಿ ಸೂಚಿಸಿದ ಷರತ್ತುಗಳನ್ನು ದಿ ತೋಟಗಾರ್ ಕೋ-ಆಪರೇಟಿವ್ ಸೇಲ್ಸ್ ಸೊಸೈಟಿ ಶಿರಸಿ ಇವರು ಪಾಲಿಸಿದ್ದು, ಅದರನ್ವಯ ಉಪಯೋಗಿ ಸಂಸ್ಥೆಯೊಂದಿಗೆ ದಿನಾಂಕ 09-04-2018 ಕರಾರು ನಾಮೆ ಆಗಿರುತ್ತದೆ.

ನಂತರದಲ್ಲಿ ಉಪಯೋಗಿ ಸಂಸ್ಥೆಯವರು ಲೀಸ್ ಮೇಲೆ ಪಡೆದ ಪ್ರದೇಶದಲ್ಲಿ ಆಸ್ಪತ್ರೆ ನಿರ್ಮಾಣದ ಒಂದು ಉದ್ದೇಶದ ಬದಲಾಗಿ, Ayurvedic Hospital, Ayurvedic Research Centre, Areca Research Centre, Auction House, Rice Mill, Ware House, Court Yard, Canteen/Bank, Herbal Garden, Bore/Under ground tank, Doctor, Nurse and Staff Quarters ಗಳನ್ನು ನಿರ್ಮಿಸುವ ಸಲುವಾಗಿ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾಪಿತ ಪ್ರದೇಶವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ಇವರು ದಿನಾಂಕ: 02-07-2019 ರಂದು ಕ್ಷೇತ್ರ ಪರಿಶೀಲಿಸಿದಾಗ ಉಪಯೋಗಿ ಸಂಸ್ಥೆಯವರು ಸದರಿ ಸ್ಥಳದಲ್ಲಿ ಯಾವುದೇ ಕಾರ್ಯ ಚಟುವಟಿಕೆ ಕೈಗೊಳ್ಳದಿರುವುದು ಕಂಡುಬಂದಿರುತ್ತದೆ ಹಾಗೂ ಈಗ ಬದಲಾವಣೆ ಕೇಳಿರುವ Component wise ಪ್ರದೇಶಗಳು 2.02 ಹೆಕ್ಟರ್ ವ್ಯಾಪ್ತಿಯಲ್ಲಿಯೇ ಬರುತ್ತದೆ ಹಾಗೂ ಹೆಚ್ಚುವರಿ ಭೂಮಿ ಸೇರಿರುವುದಿಲ್ಲ. ಆದ್ದರಿಂದ ಅರ್ಜಿದಾರರ ಬೇಡಿಕೆಯನ್ನು ನಿಯಮಾವಳಿಗನ್ವಯ ಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿರಸಿ ವಿಭಾಗ ಇವರ ವರದಿ ಹಾಗೂ ಅಡಕವನ್ನು ಪರಿಶೀಲಿಸಿ, ಸದರಿ ವರದಿಯನ್ನು ಅನುಮೋದಿಸುತ್ತಾ, ಸದರಿಯವರ ಸದರಿ ವರದಿ ಹಾಗೂ ಅಡಕವನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಗೌರವಪೂರ್ವಕ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಕೆನರಾ ವೃತ್ತ, ಶಿರಸಿ.

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ ಶಿರಸಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.